ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ. 1528/2023

| | | | |
|---|---|---|---|
| ಹೆಸರು | : | ಬೋರೇಗೌಡ | ಸಿ .ಡಬ್ಲ್ಯೂ :1 |
| ತಂದೆ ಹೆಸರು | : | ಲೇ ಶಿವರುದ್ರಯ್ಯ | ಪಿ .ಡಬ್ಲ್ಯೂ :1 |
| ವಯಸ್ಸು | : | 42 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಕೆ ಮತ್ತಿಘಟ್ಟ | |

ಸಾಕ್ಷಿಯನ್ನು ದಿಃ05-08-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ 2 ರಿಂದ 4 ರವರು ಗೊತ್ತು . ಮೃತ ಶಿವರುದ್ರಪ್ಪ ನನ್ನ ತಂದೆ .

ದಿಃ 16-03-2023 ರಂದು ಬೆಳಿಗ್ಗೆ 11.45 ರ ಸುಮಾರಿನಲ್ಲಿ ಚಾಸಾ 2 ರವರು ನನಗೆ ಕರೆ ಮಾಡಿ ಮಾದಪಟ್ಟಣ ಗೇಟ್ ನಲ್ಲಿ ನಿಮ್ಮ ತಂದೆ ಅನಾರೋಗ್ಯದಿಂದ ಇಲ್ಲಿ ಕುಳಿತಿದ್ದಾರೆ ಎಂದು ತಿಳಿಸಿದರು . ನಾನು ಸ್ಥಳಕ್ಕೆ ಬರುವ ವೇಳೆಗೆ ಅಲ್ಲಿ ಸಾಕಷ್ಟು ಜನ ಸೇರಿದ್ದರು . ಸ್ಥಳದಲ್ಲಿ ನನ್ನ ತಂದೆ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ಬಿದ್ದಿತ್ತು . ನನ್ನ ತಂದೆಯನ್ನು ಆಸ್ಪತ್ರೆಗೆ ದಾಖಲಿಸಿರುವುದಾಗಿ ಹೇಳಿದರು . ನಂತರ ನಾನು ಮತ್ತು ನನ್ನ ತಾಯಿ ಗುಬ್ಬಿ ಆಸ್ಪತ್ರೆಗೆ ಬಂದೆವು. ನನ್ನ ತಂದೆ ಮರಣ ಹೊಂದಿದ್ದಾರೆ ಎಂದು ಅವರ ಶವವನ್ನು ಗುಬ್ಬಿ ಸರ್ಕಾರಿ ಆಸ್ಪತ್ರೆ ಯ ಶವಗಾರದಲ್ಲಿ ಇಡಲಾಗಿತ್ತು. ನಂತರ ನಾನು ಆ ಸಂಬಂಧ ಠಾಣೆಗೆ ದೂರು ನೀಡಿದ್ದೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 ಎಂದು ಸಾಕ್ಷಿ ಸಹಿಯನ್ನು ನಿಪಿ -1 (ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

ಪಾಟೀಸವಾಲುಃ ಸ ಸ ಅ ರವರಿಂದಃ-

ನಿಪಿ -1 ರ ವಿವರಗಳನ್ನು ಸಾಕ್ಷಿಗೆ ಓದಿ ತಿಳಿಸಿ ಮೇಲೆ ಹೇಳಿದ ದಿನಾಂಕದಂದು ಮದ್ಯಾಹ್ನ 12.50 ಕ್ಕೆ ನಾನು ಮನೆ ಬಿಟ್ಟಾಗ ಚಾಸಾ 2 ರವರು ನಿಮ್ಮ ತಂದೆಗೆ ಮಾದಾಪಟ್ಟಣ ಗೇಟ್ ನ ಬಳಿ ಅಪಘಾತ ವಾಗಿದೆ ಎಂದು ತಿಳಿಸಿದರು ಎಂದರೆ ಸರಿ . ನಾನು ಸ್ಥಳಕ್ಕೆ ಹೋದಾಗ ನನ್ನ ತಂದೆ ಅಪಘಾತಕ್ಕೆ ಒಳಗಾಗಿ ಮರಣ ಹೊಂದಿದ್ದರು

ಎಂದರೆ ಸಾಕ್ಷಿಯು  ನನ್ನ ತಂದೆ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ಬಿದ್ದಿತ್ತು ನನ್ನ ತಂದೆ ಅಲ್ಲಿ ಇರಲಿಲ್ಲ ಎಂದು ತಿಳಿಸಿದ್ದಾರೆ . ನನ್ನ ತಂದೆ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನದ ಸಂಖ್ಯೆ ಕೆಎ 06-ಇಸಿ-5068 ಎಂದರೆ ಸರಿ. ನನ್ನ ಚಿಕ್ಕಪ್ಪ ಅಪಘಾತ ಹೇಗೆ ನಡೆಯಿತು ಎಂಬ ವಿವರಗಳನ್ನು ಸಂಪೂರ್ಣವಾಗಿ ನನಗೆ ತಿಳಿಸಿದರು ಎಂದರೆ ಸರಿ . ಸ್ಥಳದಲ್ಲಿ ನನ್ನ ತಂದೆ ಮೃತಪಟ್ಟಿದರು ಎಂಬ ವಿಚಾರವನ್ನು ನನ್ನ ಚಿಕ್ಕಪ್ಪ ತಿಳಿಸಿದರು ಎಂದರೆ ಸರಿ . ಯಾವುದೋ ವಾಹನದಲ್ಲಿ ನನ್ನ ತಂದೆ ಶವವನ್ನು ಗುಬ್ಬಿ ಸರ್ಕಾರಿ ಆಸ್ಪತ್ರೆ ಗೆ ಕಳುಹಿಸಿದ್ದೆವು ಎಂದರೆ ಸರಿ . ಕೆ ಎ 16-ಎಂ -3815 ಕಾರಿನ ಚಾಲಕ ವಾನಹವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ  ಚಲಾಯಿಸಿದ ಕಾರಣದಿಂದಲೇ ಈ ಅಪಘಾತ ನಡೆದಿದೆ ಎಂದರೆ ಸರಿ.

ಪಾಟೀಸವಾಲು:  ಆರೋಪಿ ಪರ  ವಕೀಲರಿಂದಃ-

__ನಿಪಿ1 ರಲ್ಲಿ_ ಏನು ಬರೆಯಲಾಗಿದೆ  ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ಪೊಲೀಸರು ಸಹಿ ಮಾಡಲು ಹೇಳಿದ ಕಾರಣ ಸಹಿ ಮಾಡಿದ್ದೇನೆ ಎಂದರೆ ಸರಿ. ಮೇಲೆ ಹೇಳಿದಂತೆ ನನ್ನ ಚಿಕ್ಕಪ್ಪ ನನಗೆ ಯಾವುದೇ ವಿಚಾರ ನನಗೆ ತಿಳಿಸಿಲ್ಲ ಎಂದರೆ ಸಾಕ್ಷಿಯು ನನ್ನ ಚಿಕ್ಕಪ್ಪ ಕರೆ ಮಾಡಿ ನನ್ನ ತಂದೆ ಅನಾರೋಗ್ಯದಿಂದ ಕುಳಿತಿದ್ದಾರೆ ಎಂದು ತಿಳಿಸಿದ್ದರು. ನಾನು ಸ್ಥಳಕ್ಕೆ ಹೋದಾಗ ನನ್ನ ತಂದೆ ಅಲ್ಲಿ ಇರಲಿಲ್ಲ ಎಂದು ತಿಳಿಸಿದ್ದಾರೆ.  ಅಪಘಾತ ಪರಿಹಾರ ದೊರೆಯಲಿ ಎಂಬ ಕಾರಣಕ್ಕೆ ಪೊಲೀಸರು ಹೇಳಿಕೊಟ್ಟಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ ,  ಸರಿ ಇದೆ ಎಂದು ಒಪ್ಪಿದ್ದಾರೆ.
SD/-

(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.